


ಬೆಂಗಳೂರಿನ ಮಲ್ಲೇಶ್ವರ ಸರ್ಕಾರಿ ಶಾಲೆ–ಕಾಲೇಜಿನ ಆವರಣದಲ್ಲಿ ದ್ವಾರಪಾಲಕರಂತೆ ನಿಂತಿರುವ ಉಪಗ್ರಹಗಳ ಮಾದರಿಗಳ ಜೊತೆಯಲ್ಲಿ 'ಎಳೆಯ ವಿಜ್ಞಾನಿಗಳು'.

ಮಾಡಿಕೊಳ್ಳುತ್ತಿರುವ ತಯಾರಿಯ ಬಗ್ಗೆ ವಿವರವಾಗಿ ಹೇಳಿ, ಹೇಗೆ ನಮ್ಮ ಬೆಂಗಳೂರು ವಿಭಾಗದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೇ ಉಪಗ್ರಹ ತಯಾರಿಸುತ್ತಿದ್ದಾರೆ, ಯೋಜನೆ ಯಾವಾಗ ಶುರುವಾಯಿತು ಎಂಬೆಲ್ಲ ವಿವರಗಳನ್ನು ನೀಡಿದಾಗ ಶ್ರೀನಿವಾಸಣ್ಣ ಸಮಾಧಾನಗೊಂಡರು. 'ಆಯಿತು ಸರ್, ಆದ್ರೆ ದಿನ ಪೂರ್ತಿ ಅದೇ ಮಾಡ್ತಾ ಇದ್ರೆ, ಓದೋದ್ಯಾವಾಗ?' ಎಂದರು.

'ನೋಡು ರೋಹಿತ್, ಓದಿನ ಜೊತೆಯೇ ಇದನ್ನು ಮಾಡಬೇಕು, ಬರೀ ಇದನ್ನೇ ಮಾಡ್ತಾ ಕೂತ್ರೆ ನಿನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತೆ. ಬಿಡುವಿನಲ್ಲಿ ಮಾತ್ರ ಈ ಕೆಲಸ ಮಾಡಬೇಕು' ಎಂದೆ.

'ಆಯ್ತು ಸರ್' ಎಂದು ಹೇಳಿ ಇಬ್ಬರೂ ಹೊರಟರು.

## ಬಾನ ದಾರಿಯಲ್ಲಿ 'ಪುನೀತ್ ಪ್ರಭೆ'

ಹೌದು, ಕರ್ನಾಟಕದ ಮನೆಮಾತಾಗಿದ್ದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಹೆಸರಿನ




**75 ವಿದ್ಯಾರ್ಥಿ ಉಪಗ್ರಹ ಯೋಜನೆಗೆ ಕೈ ಜೋಡಿಸಿರುವ ಸಂಸ್ಥೆಗಳು**

ಆಲ್ಫಾ ಡಿಸೈನ್ ಟೆಕ್ನಾಲಜೀಸ್; ಕರ್ನಾಟಕ ಹೈಬ್ರಿಡ್ ಮೈಕ್ರೊ ಡಿವೈಸಸ್ ಲಿಮಿಟೆಡ್; ನ್ಯೂಟಿಕ್ ಸಲ್ಯೂಶನ್ಸ್, ಮೈಕ್ರೊಪ್ಯಾಕ್ ಲಿಮಿಟೆಡ್; ಡುಕಾಮ್ ಏರೋ ಸ್ಪೇಸ್; ಧ್ರುವ ಸ್ಪೇಸ್; ಕೆಪ್ಲರ್ ಏರೋ ಸ್ಪೇಸ್; ಟಿಎಸ್‌ಸಿ, URSC – ಯು.ಆರ್. ರಾವ್ ಸ್ಯಾಟಲೈಟ್ ಸೆಂಟರ್; ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಶನ್.